Tel: "UNIKARNATAK"

Phone: (0836)-2215271

# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

# KARNATAK UNIVERSITY, DHARWAD.

*NAAC Accreditted with "A" Grade 2022*
UNIVERSITY WITH POTENTIAL FOR EXCELLENCE"

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಘಟಕ
ಪಾವಟೆ ನಗರ, ಧಾರವಾಡ-೫೮೦೦೦೩.

**SCH. CASTES & SCH. TRIBES CELL**
**Pavate Nagar, Dharwad – 580003**

ಕವಿ.40(ಪಜಾ:ಪಪಂ)/2023-24/806

ದಿನಾಂಕ: 03.11.2023

0 3 NOV 2023

## ಸುತ್ತೋಲೆ

ವಿಷಯ: 2023-24 ನೇ ಸಾಲಿಗೆ ಎಲ್ಲ ಸ್ನಾತಕೋತ್ತರ / ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸುಗಳ ಮೊದಲನೇ ಹಾಗೂ ಎರಡನೇಯ ವರ್ಷದ ಪ್ರವೇಶ ಪಡೆದುಕೊಳ್ಳಲು ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶುಲ್ಕ ವಿನಾಯತಿ ಸಂದರ್ಭದಲ್ಲಿ Freeship Card ಸಲ್ಲಿಸುವ ಕುರಿತು

ಉಲ್ಲೇಖ: 1) ಸರಕಾರದ ಆದೇಶ ಸಂಖ್ಯೆ SWD/EDU/ED 3/91/2023 (Com: 1098854) Bangalore ದಿನಾಂಕ 03.07.2023

2) ಕರ್ನಾಟಕ ಸರಕಾರದ ಆದೇಶ ಸಂಖ್ಯೆ ಸಕಇ.93 ಪಕವಿ 2023, ಬೆಂಗಳೂರು ದಿನಾಂಕ 07.08.2023

3) ಭಾರತ ಸರ್ಕಾರದ ಮೆಟ್ರಿಕ್ ನಂತರದ ಮಾರ್ಗಸೂಚಿ (2020-21 ರಿಂದ 2025-26 ರವರೆಗೆ) ಕಂಡಿಕೆ ಸಂಖ್ಯೆ 8 Freeship Card ಕುರಿತು

4) ಮಾನ್ಯ ಕುಲಪತಿಗಳ ಆದೇಶ ದಿನಾಂಕ: 03-11-2023

ಮೇಲ್ಕಾಣಿಸಿದ ವಿಷಯ ಸಂಬಂಧಿಸಿದಂತೆ, ಪ್ರಸ್ತುತ 2023-24ನೇ ಸಾಲಿನಿಂದ ಸ್ನಾತಕೋತ್ತರ / ಡಿಪ್ಲೋಮಾ /ವೃತ್ತಿಪರ ಕೋರ್ಸಗಳ ಮೊದಲನೇ ಹಾಗೂ ಎರಡನೇ ವರ್ಷಕ್ಕೆ ಪ್ರವೇಶ ಪಡೆಯುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಪ್ರವೇಶ ಪಡೆಯುವ ಸಮಯದಲ್ಲಿ ಉಲ್ಲೇಖ (01) ಮತ್ತು (02)ರ ಪ್ರಕಾರ ಶುಲ್ಕ ವಿನಾಯತಿಗಾಗಿ Freeship Card ನ್ನು ಸಲ್ಲಿಸುವುದು ಕಡ್ಡಾಯವೆಂದು ಈಗಾಗಲೇ ಸುತ್ತೋಲೆಯ ಮೂಲಕ ತಿಳಿಸಲಾಗಿತ್ತು. ಆದರೆ, Freeship Card ಪ್ರವೇಶ ಪಡೆದುಕೊಂಡ ನಂತರ ಮಾತ್ರ ದೊರೆಯುವ ಅವಕಾಶವಿರುವುದರಿಂದ ಈ ಹಿಂದಿನಂತೆ ಅರ್ಹ ಪರಿಶಿಷ್ಟ ಜಾತಿ/ ಪಂಗಡದ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿ ಪಡೆಯಲು ಇಚ್ಛಿಸಿದಲ್ಲಿ ಸಂಬಂಧಿಸಿದ ಇಲಾಖೆಯಿಂದ ಪಡೆದುಕೊಂಡ ಜಾತಿ ಮತ್ತು ಆದಾಯ ಪ್ರಮಾಣಪತ್ರವನ್ನು ಸಲ್ಲಿಸಿ ಈ ಹಿಂದಿನಂತೆ ಶುಲ್ಕ ವಿನಾಯತಿ ಪಡೆದುಕೊಳ್ಳುವುದು.

ಮುಂದುವರೆದು, ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಿಂದ ದೊರೆತ ನೊಂದಣೀ ಸಂಖ್ಯೆಯನ್ನು ಉಪಯೋಗಿಸಿ ಪ್ರವೇಶ ಪಡೆದುಕೊಂಡ 30 ದಿನಗಳ ಒಳಗಾಗಿ ಸಮಾಜ ಕಲ್ಯಾಣ ಇಲಾಖೆಯ ಎಸ್.ಎಸ್.ಪಿ ಪೋರ್ಟಲನಲ್ಲಿ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಿ Freeship Card ಪಡೆದು ಆಯಾ ಪ್ರವೇಶ ಪಡೆದ ವಿಭಾಗಗಳಿಗೆ ಕಡ್ಡಾಯವಾಗಿ ಸಲ್ಲಿಸುವುದು ಅವಶ್ಯವಿರುತ್ತದೆ. ಆದ್ದರಿಂದ, ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳು ಈ ಮೇಲಿನಂತೆ Freeship Card ಪಡೆದುಕೊಂಡು, ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು/ ಸಂಯೋಜಕರು/ ಆಡಳಿತಾಧಿಕಾರಿಗಳು/ ಪ್ರಾಚಾರ್ಯರುಗಳಿಗೆ ಪ್ರವೇಶ ಪಡೆದುಕೊಂಡ 45 ದಿನಗಳ ಒಳಗಾಗಿ

ಪು.ತಿ.ನೋ

Freeship Card ನ ಪ್ರತಿಯನ್ನು ಸಲ್ಲಿಸುವುದು. ವಿದ್ಯಾರ್ಥಿಗಳು ನಿಗದಿತ ಅವಧಿಯೊಳಗೆ Freeship Card ಪಡೆದುಕೊಳ್ಳದಿದ್ದರೆ, ನಿಯಮಾನುಸಾರ ಶುಲ್ಕ ವಿನಾಯತಿಗೆ ಅನರ್ಹರಾಗಿರುತ್ತಾರೆ. ಆದ್ದರಿಂದ, ಅಂತಹ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಭರಿಸುವದು ಕಡ್ಡಾಯವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಉಪಕುಲಸಚಿವರು, ಪರಿಶಿಷ್ಟ ಜಾತಿ/ ಪಂಗಡ ಘಟಕವನ್ನು ಸಂಪರ್ಕಿಸಲು ತಿಳಿಸಲಾಗಿದೆ. ಮುಂದುವರೆದು, ಎಲ್ಲ ವಿಭಾಗಗಳ ಅಧ್ಯಕ್ಷರು/ ಸಂಯೋಜಕರು/ ಆಡಳಿತಾಧಿಕಾರಿಗಳು/ ಪ್ರಾಚಾರ್ಯರುಗಳು ಈ ಮೇಲಿನಂತೆ ಕ್ರಮ ವಹಿಸಲು ಸೂಚಿಸಲಾಗಿದೆ.

03 NOV 2023

ಕುಲಸಚಿವರು 3/11/23

ಗೆ,

1) ಎಲ್ಲ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು, ಕವಿವಿ ಆವರಣ. ಕವಿವಿ ಧಾರವಾಡ
2) ಎಲ್ಲ ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಘಟಕ / ಸಂಲಗ್ನ ಮಹಾವಿದ್ಯಾಲಯಗಳು, ಧಾರವಾಡ
3) ಆಡಳಿತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಗಳಾದ ಹಾವೇರಿ, ಗದಗ ಮತ್ತು ಕಾರವಾರ ಕವಿವಿ ಧಾರವಾಡ
4) ಉಪಕುಲಸಚಿವರು, ವಿದ್ಯಾಮಂಡಳ (ಪಿ.ಜಿ) ವಿಭಾಗ, ಕವಿವಿ ಧಾರವಾಡ

ಪ್ರತಿ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ;

1) ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ, ಕವಿವಿ ಧಾರವಾಡ
2) ನಿರ್ದೇಶಕರು, ಐ.ಟಿ. ವಿಭಾಗ, ಕವಿವಿ ಧಾರವಾಡ
3) ನಿರ್ದೇಶಕರು, UUCMS ವಿಭಾಗ ಕವಿವಿ ಧಾರವಾಡ
4) ಕವಿವಿಯ ಎಲ್ಲ ವಸತಿನಿಲಯಗಳ ನಿಲಯಪಾಲಕರುಗಳಿಗೆ,
5) ಸಹಾಯಕ ನಿರ್ದೇಶಕರು (ಗ್ರೇಡ್-1), ತಾಲೂಕು ಸಮಾಜ ಕಲ್ಯಾಣ ಇಲಾಖೆ, ಡಿ.ಸಿ. ಕಚೇರಿ ಹತ್ತಿರ ಧಾರವಾಡ

ಪ್ರತಿ ಮಾಹಿತಿಗಾಗಿ;

1) ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ಕವಿವಿ ಧಾರವಾಡ
2) ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕುಲಸಚಿವರ ಕಾರ್ಯಾಲಯ, ಕವಿವಿ ಧಾರವಾಡ
3) ಮಾನ್ಯ ಕುಲಸಚಿವರ (ಮೌಲ್ಯಮಾಪನ), ಆಪ್ತ ಸಹಾಯಕರು, ಕವಿವಿ ಧಾರವಾಡ
4) ಹಣಕಾಸು ಅಧಿಕಾರಿಗಳ, ಆಪ್ತ ಸಹಾಯಕರು, ಹಣಕಾಸು ವಿಭಾಗ, ಕವಿವಿ ಧಾರವಾಡ